# ಬೆಳ್ಳಿಹಬ್ಬಕ್ಕೆ ವರ್ಗಾವಣೆ ಪ್ರಹಸನ!

ಮೈಸೂರಿನ ರಂಗಾಯಣದ ಕಲಾವಿದರಿಗೆ ಕಳೆದ ಒಂದೂವರೆ ವರ್ಷದಿಂದ ಹೊಸ ನಾಟಕ ಪ್ರದರ್ಶಿಸಲು ಸಾಧ್ಯವಾಗಿಲ್ಲ. ಈ ವೃತ್ತಿಪರ ಕಲಾವಿದರನ್ನು ನಾಚಿಸುವಂತೆ ರಾಜ್ಯ ಸರ್ಕಾರ 'ವರ್ಗಾವಣೆ ಪ್ರಹಸನ' ಹಮ್ಮಿಕೊಂಡಿದೆ. ಇದು ಆರಂಭಗೊಂಡಿದ್ದು ಮೈಸೂರಿನ ರಂಗಾಯಣದ ಹನ್ನೆರಡು ಕಲಾವಿದರನ್ನು ಧಾರವಾಡ ಮತ್ತು ಶಿವಮೊಗ್ಗ ಕೇಂದ್ರಗಳಿಗೆ ನಿಯೋಜಿಸುವ ಮೂಲಕ. ಇದನ್ನು ಪ್ರತಿಭಟಿಸಿದ ರಂಗಾಯಣದ ನಿರ್ದೇಶಕ ಬಿ.ವಿ. ರಾಜಾರಾಂ ಅವರನ್ನು ಸರ್ಕಾರ ಅಧಿಕಾರದಿಂದ ನೇಪಥ್ಯಕ್ಕೆ ಸರಿಸಿದೆ. ಮಾತಿಗೆ ಎದುರು ನುಡಿದವರನ್ನು ದಾರಿಯಿಂದಲೇ ನಿವಾರಿಸಿಬಿಡುವ ಪ್ರಜಾತಂತ್ರ ವಿರೋಧಿ ನಿಲುವಿದು.

ಸ್ಪಷ್ಟವಾದ ಸಾಂಸ್ಕೃತಿಕ ನೀತಿ ಇಲ್ಲದ, ಕೇಸರೀಕರಣದ ಅನುಷ್ಠಾನವೇ ತನ್ನ ಒಂದಂಶದ ಸಾಂಸ್ಕೃತಿಕ ನೀತಿಯಂತೆ ನಡೆದುಕೊಳ್ಳುತ್ತಿರುವ ಸರ್ಕಾರ, ರಂಗಾಯಣದ ವಿಷಯದಲ್ಲೂ ತನ್ನ ಸಾಂಸ್ಕೃತಿಕ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸ್ಪಷ್ಟವಾಗಿದೆ.

ಹಾಗೆ ನೋಡಿದರೆ ರಂಗಾಯಣದ ಕಲಾವಿದರನ್ನು ವರ್ಗಾಯಿಸುವ ನಿಲುವಿಗೆ ಸಾಂಸ್ಕೃತಿಕ ಕ್ಷೇತ್ರದಿಂದ ಮಿಶ್ರ ಪ್ರತಿಕ್ರಿಯೆಗಳು ವ್ಯಕ್ತವಾಗಿವೆ. ಸುಮಾರು ಇಪ್ಪತ್ತೈದು ವರ್ಷಗಳಿಂದ ಒಂದು ತಂಡವಾಗಿ ಇರುವ ಕಲಾವಿದರನ್ನು ನಿಯೋಜನೆಯ ನೆಪದಲ್ಲಿ ಒಡೆಯಬಾರದು ಎನ್ನುವ ಮಾತಿದೆ. ಕಲಾವಿದರು ನಿಂತ ನೀರಿನಂತಾಗಬಾರದು. ಹಿರಿಯ ಕಲಾವಿದರು ತಮ್ಮ ಅನುಭವದ ಸಾರವನ್ನು ರಂಗಾಯಣದ ಉಳಿದ ಕೇಂದ್ರಗಳ ಕಿರಿಯರೊಂದಿಗೆ ಹಂಚಿಕೊಳ್ಳಬೇಕು ಎನ್ನುವುದು ಮತ್ತೊಂದು ತರ್ಕ. ಎರಡೂ ವಾದಗಳಲ್ಲಿ ಹುರುಳಿದೆ. ತಂಡವೊಂದನ್ನು ಒಡೆಯುವುದರಿಂದ ಕಲಾವಿದರ ಹುಮ್ಮಸ್ಸಿಗೆ ಧಕ್ಕೆ ಉಂಟಾಗಬಹುದು. ದೀರ್ಘ ಕಾಲದ ಸಾಹಚರ್ಯದಿಂದ ಮನೆಯ ಸದಸ್ಯರ ನಡುವೆ ರೂಪುಗೊಳ್ಳುವ ಮಾನಸಿಕ ಹೊಂದಾಣಿಕೆ ಕಲಾವಿದರಲ್ಲೂ ಸಹಜವಾಗಿ ಏರ್ಪಟ್ಟು, ಅದು ರಂಗದ ಮೇಲೆ ಅಭಿವ್ಯಕ್ತಗೊಳ್ಳುತ್ತದೆ. ರಂಗದ ಒಳಹೊರಗಿನ ಈ ಹದ ಸದಸ್ಯರ ಬದಲಾವಣೆಯಿಂದಾಗಿ ದುರ್ಬಲಗೊಳ್ಳಬಹುದು. ಹಾಗೆಂದು, ಕಲಾವಿದರು ಇದ್ದಲ್ಲಿಯೇ ಇರಬೇಕೆಂದು ಹೇಳುವುದು ಸರಿಯಾಗದು. ಪ್ರಶ್ನೆ ಇರುವುದು ಕಲಾವಿದರ ನಿಯೋಜನೆಯ ಹಿಂದಿನ ಸಂದರ್ಭ ಮತ್ತು ಉದ್ದೇಶದ ಕುರಿತಂತೆ.

ಕಲಾವಿದರನ್ನು ಇತರ ಕೇಂದ್ರಗಳಿಗೆ ವರ್ಗಾಯಿಸುವ ಸಂದರ್ಭದಲ್ಲಿ ರಂಗಾಯಣದ ನಿರ್ದೇಶಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ, ಸರ್ಕಾರ ಏಕಪಕ್ಷೀಯವಾಗಿ ನಡೆದುಕೊಂಡಿದೆ. ಈ ಧೋರಣೆಯನ್ನು ವಿರೋಧಿಸಿರುವ ನಿರ್ದೇಶಕ ರಾಜಾರಾಂ, 'ಕಲಾವಿದರ ನಿಯೋಜನೆಯ ಹಿಂದೆ ರಂಗ ಸಮಾಜದ ಸದಸ್ಯರ ಕೈವಾಡವಿದೆ' ಎಂದು ನೇರವಾಗಿ ಆರೋಪಿಸಿದ್ದಾರೆ. ಅವರು ಹೇಳುವಂತೆ, ಮುಂದಿನ ವರ್ಷ ರಂಗಾಯಣದ ಬೆಳ್ಳಿಹಬ್ಬ ನಡೆಯಲಿದೆ. ಇಂಥ ಸಂದರ್ಭದಲ್ಲಿ ವರ್ಗಾವಣೆ ನೆಪದಲ್ಲಿ ಕಲಾವಿದರನ್ನು ಬೇರೆಡೆಗೆ ಕಳಿಸುವುದು ಮಾನವೀಯವಾದ ನಡವಳಿಕೆಯೇನಲ್ಲ. ಅಂತೆಯೇ ಚುನಾವಣೆ ಸಂದರ್ಭದಲ್ಲಿ ಏನೆಲ್ಲ ಕೆಲಸಗಳನ್ನು ಬಿಟ್ಟು ವರ್ಗಾವಣೆಗೆ ಸರ್ಕಾರಕ್ಕೆ ಪುರುಸೊತ್ತು ದೊರಕಿರುವುದೂ ಆಶ್ಚರ್ಯ.

ಹಿರಿಯ ಕಲಾವಿದರ ಅನುಭವ ರಂಗಾಯಣದ ಇತರ ಕೇಂದ್ರಗಳ ಕಲಾವಿದರಿಗೆ ದೊರೆಯಬೇಕು ಎನ್ನುವ ಆಶಯದ ಈಡೇರಿಕೆಗೆ ಇರುವ ಪರ್ಯಾಯ ಮಾರ್ಗಗಳನ್ನು ವರ್ಗಾವಣೆಯ ಪರ ಇರುವವರು ಪರಿಶೀಲಿಸಲು ಹೋದಂತಿಲ್ಲ. ಕಿರಿಯ ಕಲಾವಿದರನ್ನು ಮೈಸೂರಿಗೇ ಕರೆಸಿ ತರಬೇತಿ ನೀಡುವುದು ಸಾಧ್ಯವಿದೆ. ಹಿರಿಯ ಕಲಾವಿದರನ್ನು ಅಲ್ಪ ಕಾಲದವರೆಗೆ ಬೇರೆ ಕೇಂದ್ರಗಳಿಗೆ ಕಳಿಸಿಕೊಡುವುದರ ಮೂಲಕವೂ ರಂಗಪಾಠ ಸಾಧ್ಯವಿದೆ. ಇದೆಲ್ಲವನ್ನೂ ಬಿಟ್ಟು ತಂಡದಲ್ಲಿನ ಬಹುತೇಕ ಕಲಾವಿದರನ್ನು ಬೇರೆ ಬೇರೆಡೆಗೆ ಒಮ್ಮೆಗೇ ಹಂಚಿಕೆ ಮಾಡುವುದು ಒಡೆದು ಆಳುವ ನೀತಿಯಂತಿದೆ. ಮೈಸೂರು ಘಟಕವನ್ನು ದುರ್ಬಲಗೊಳಿಸಿ ರಂಗಾಯಣದ ಇತರ ಘಟಕಗಳನ್ನು ಸಶಕ್ತಗೊಳಿಸಲು ಹೊರಡುವ ಕ್ರಮ ಬುದ್ಧಿವಂತಿಕೆಯದ್ದೇನಲ್ಲ.

1989ರಲ್ಲಿ ಆರಂಭವಾದ 'ರಂಗಾಯಣ', ಬಿ.ವಿ. ಕಾರಂತರ ಗರಡಿಯಲ್ಲಿ ಕನ್ನಡ ರಂಗಭೂಮಿಯ ಕ್ಷಿತಿಜಗಳನ್ನು ವಿಸ್ತರಿಸಿದ್ದು ಈಗ ಇತಿಹಾಸ. ವಿಪರ್ಯಾಸವೆಂದರೆ ಅದು ತನ್ನ ಆರಂಭದ ದಿನಗಳಿಂದಲೂ ವಿವಾದಗಳೊಂದಿಗೇ ಬೆಳೆದುಬಂದಿದೆ. ಸ್ವತಃ ಬಿ.ವಿ. ಕಾರಂತರಲ್ಲೇ ರಂಗಾಯಣದ ಬಗ್ಗೆ ಕಹಿ ನೆನಪುಗಳು ಉಳಿದಿದ್ದವು. ಆ ವಿಷಮ ಪರಂಪರೆ ಬೇರೆ ಬೇರೆ ರೂಪಗಳಲ್ಲಿ ಬಿ. ಜಯಶ್ರೀ, ರಾಜಾರಾಂ ಅವರವರೆಗೆ ಮುಂದುವರಿದಿದೆ.

ಶಿವಮೊಗ್ಗದಲ್ಲಿನ ರಂಗಾಯಣದ ಕೇಂದ್ರವನ್ನು ಉದ್ಘಾಟಿಸುವ ಸಂದರ್ಭದಲ್ಲಿ ಅಂದಿನ ಮುಖ್ಯಮಂತ್ರಿ ಸದಾನಂದಗೌಡರು– "ಒತ್ತಡದಿಂದ ಹೊರಬರಲು ಮನುಷ್ಯನಿಗೆ ಕಲಾ ಚಟುವಟಿಕೆಗಳು ಅತ್ಯಗತ್ಯ. ರಾಜಕಾರಣದಲ್ಲಿ ನಟನೆ ಮಾಡುವುದು ಒಂದು ಕಲೆ. ಅದನ್ನು ರಾಜಕಾರಣಿಗಳು ಚೆನ್ನಾಗಿ ಕರಗತ ಮಾಡಿಕೊಂಡಿರುತ್ತಾರೆ" ಎಂದು ವಿನೋದದ ಮಾತನಾಡಿದ್ದರು. ಅವರ ಪಕ್ಷದ್ದೇ ಸರ್ಕಾರ ಇರುವ ಸಂದರ್ಭದಲ್ಲಿ ಈ ಮಾತು ವಾಸ್ತವದ ಕಟು ವಿಡಂಬನೆಯಂತೆ ತೋರುತ್ತದೆ. ನಾಟಕ ಆಡುವುದನ್ನು ಕಲಾವಿದರ ಪಾಲಿಗೇ ಬಿಡುವುದು ರಾಜ್ಯದ ಸಾಂಸ್ಕೃತಿಕ ಆರೋಗ್ಯಕ್ಕೆ ಒಳ್ಳೆಯದು.

**ರಘುನಾಥ ಚ.ಹ.**

**ಸ್ಪಷ್ಟವಾದ ಸಾಂಸ್ಕೃತಿಕ ನೀತಿ ಇಲ್ಲದ, ಕೇಸರೀಕರಣದ ಅನುಷ್ಠಾನವೇ ತನ್ನ ಒಂದಂಶದ ಸಾಂಸ್ಕೃತಿಕ ನೀತಿಯಂತೆ ನಡೆದುಕೊಳ್ಳುತ್ತಿರುವ ಸರ್ಕಾರ, ರಂಗಾಯಣದ ವಿಷಯದಲ್ಲೂ ತನ್ನ ಸಾಂಸ್ಕೃತಿಕ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸ್ಪಷ್ಟವಾಗಿದೆ.**



ಈಶ್ವರ್